# ಕರ್ನಾಟಕ ಸರ್ಕಾರದ ನಡವಳಿಗಳು
## (ಜಲಸಂಪನ್ಮೂಲ ಇಲಾಖೆ)

ವಿಷಯ :- ಹಾವೇರಿ ಜಿಲ್ಲೆ, ಹಾನಗಲ್ ತಾಲ್ಲೂಕಿನ ಧರ್ಮಾ ಕಾಲುವೆ ಜಾಲದ ಆಧುನೀಕರಣದ ರೂ. 38.00 ಕೋಟಿಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ :- ಮುಖ್ಯ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗ ಇವರ ಪತ್ರ ಸಂಖ್ಯೆ : ಮುಇಂ : ಕನೀನಿನಿ : ತುಂಮೇಯೋವ : ತಾಂಸ-2 : ಯೋಶಾ-4 : 2011-12 : 5550 : ದಿ. 12.03.2012 ಮತ್ತು 2012-13 : 3283 : ದಿ. 13.09.2012 ಹಾಗೂ 5338 : ದಿ. 27.12.2012

------

ಪ್ರಸ್ತಾವನೆ :-

ಧರ್ಮಾ ಜಲಾಶಯವು ವರದಾ ನದಿಯ ಉಪ ನದಿಯಾದ ಧರ್ಮಾ ನದಿಗೆ ಅಡ್ಡಲಾಗಿ ಹಾವೇರಿ ಜಿಲ್ಲೆ ಹಾನಗಲ್ ಪಟ್ಟಣದಿಂದ ಸುಮಾರು 12 ಕಿ.ಮೀ. ಅಂತರದಲ್ಲಿ ಶೃಂಗೇರಿ ಗ್ರಾಮದ ಹತ್ತಿರ ಇರುತ್ತದೆ. ಇದು ಮಣ್ಣಿನ ಏರಿಯ ಅಣೆಕಟ್ಟಾಗಿದ್ದು 1964 ರಲ್ಲಿ ಪೂರ್ಣಗೊಂಡಿರುತ್ತದೆ. ಜಲಾಶಯದ ನೀರಿನ ಸಾಮರ್ಥ್ಯ 22.24 ಮಿ.ಮೀ.$^3$ ಸಿ.ಸಿ.ಎ. 7692 ಹೆ. ಆಗಿರುತ್ತದೆ. ಶೃಂಗೇರಿ ಪಿಕ್‌ಅಪ್‌ಅನ್ನು ಧರ್ಮಾ ಅಣೆಕಟ್ಟಿಗೆ 8 ಕಿ.ಮೀ. ಕೆಳಭಾಗದಲ್ಲಿ ಮುಖ್ಯ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ. ಎಡದಂಡೆ ಕಾಲುವೆಯ ಉದ್ದ 6 ಕಿ.ಮೀ. ಇದ್ದು, ಬಲದಂಡೆ ಕಾಲುವೆಯ ಉದ್ದ 9.46 ಕಿ.ಮೀ. ಆಗಿರುತ್ತದೆ,

ಮೇಲೆ ಓದಲಾದ ಪತ್ರಗಳಲ್ಲಿ ಮುಖ್ಯ ಇಂಜಿನಿಯರ್‌ರವರು ಹಾವೇರಿ ಜಿಲ್ಲೆ, ಹಾನಗಲ್ ತಾಲ್ಲೂಕಿನ ಧರ್ಮಾ ಕಾಲುವೆ ಜಾಲದ ಆಧುನೀಕರಣದ ಪ್ರಸ್ತಾವನೆಯನ್ನು ಸಲ್ಲಿಸುತ್ತಾ, ಸದರಿ ಅಣೆಕಟ್ಟಿನಿಂದ ಯೋಜಿತ ಸಿ.ಸಿ.ಎ. ಆದ 7962 ಹೆ. ಪ್ರದೇಶದಲ್ಲಿ 5708 ಹೆ. ಪ್ರದೇಶಕ್ಕೆ ಮಾತ್ರ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ ಹಾಗೂ ಬಾಕಿ ಉಳಿದ 1984 ಹೆ. ಪ್ರದೇಶಕ್ಕೆ ಅನಿಯಮಿತ ವಿತರಣಾ ವ್ಯವಸ್ಥೆಯಿಂದಾಗಿ ನೀರು ತಲಪುತ್ತಿಲ್ಲ. ದೀರ್ಘಕಾಲದ ಹಾಗೂ ಕಾಲುವೆಗಳ ಮೇಲ್ಭಾಗದಲ್ಲಿ ಹೆಚ್ಚಿನ ನೀರಿನ ಬಳಕೆಯಿಂದಾಗಿ ಕಾಲುವೆಗಳು ಹಾಗೂ ಕಟ್ಟಡಗಳು ಹಾಳಾಗಿರುತ್ತವೆ. ಈಗಿರುವ ಕಾಲುವೆ ಜಾಲದಲ್ಲಿ ಬಲದಂಡೆ ಕಾಲುವೆಯನ್ನು 14.50 ಕಿ.ಮೀ.ವರೆಗೆ ಮಾತ್ರ ಲೈನಿಂಗ್ ಮಾಡಲಾಗಿದೆ. ಇನ್ನುಳಿದ ಕಾಲುವೆ ಜಾಲಕ್ಕೆ ಲೈನಿಂಗ್ ಇರುವುದಿಲ್ಲ. ಕಾಲುವೆಯ ಕೆಲವೊಂದು ಭಾಗಗಳಲ್ಲಿ ನಿರ್ವಹಣೆ ಇದ್ದರೂ ಇದು ಸಾಕಾಗುತ್ತಿಲ್ಲ. ನಿರ್ವಹಣೆ ಕೊರತೆಯಿಂದ ಹೆಚ್ಚಿನ ಭಾಗಗಳಲ್ಲಿ ಕಾಲುವೆ ಜಾಲ ತನ್ನ ಆಕಾರ ಕಳೆದುಕೊಂಡಿರುತ್ತದೆ ಹಾಗೂ ಸಿ.ಡಿ. ಕಟ್ಟಡಗಳನ್ನು ಪುನರ್ ನಿರ್ಮಿಸಬೇಕಾಗಿರುತ್ತದೆ. ನೀರಿನ ಕೊರತೆದಿಂದಾಗಿ ಕಾಲುವೆಗಳು ಆಕಾರಗಳನ್ನು ಕಳೆದುಕೊಂಡಿರುವುದರಿಂದ, ಹರಿವು ನಿಧಾನವಾಗಿ, ನಾಲೆಯ ಕೊನೆಯ ಅಂಚಿನವರಗೂ ನೀರು ತಲುಪಲಾಗುತ್ತಿಲ್ಲ. ಎಲ್ಲಾ ಪೈಪ್ ಔಟ್‌ಲೆಟ್‌ಗಳು ಶಿಥಿಲಾವಸ್ಥೆ ತಲುಪಿರುತ್ತದೆ. ಈ ಕಾರಣದಿಂದಾಗಿ ಈಗಿರುವ ನಾಲಾ ಜಾಲಗಳ ಆಧುನೀಕರಣವನ್ನು ಕೈಗೊಳ್ಳಲು ಯೋಜಿಸಲಾಗಿದೆಯೆಂದು ತಿಳಿಸಿರುತ್ತಾರೆ.

ಮುಂದುವರೆದಿದೆ... 2

ಈಗಿರುವ ಎಲ್ಲಾ ಪೈಪ್ ಔಟ್‌ಲೆಟ್‌ಗಳನ್ನು ಸೂಕ್ತ ಗೇಟ್ ಹಾಗೂ ನಿಯಂತ್ರಣ ವ್ಯವಸ್ಥೆಯೊಂದಿಗೆ ಪುನರ್‌ನಿರ್ಮಿಸಲು ಹಾಗೂ ಬಲದಂಡೆ ಕಾಲುವೆಯ ಹಂಚು ಕಾಲುವೆಗಳಲ್ಲಿ 49 ಸಂಖ್ಯೆ ಡ್ರಾಪ್‌ಗಳನ್ನು ನಿರ್ಮಿಸಲು ಯೋಜಿಸಲಾಗಿದೆ. ಬಲದಂಡೆ ಕಾಲುವೆಯ ಒಂದು ಕಾಲ್ಸೇತುವೆಯನ್ನು ಪುನರ್‌ನಿರ್ಮಿಸಲು ಹಾಗೂ ಎರಡು ಇನ್‌ಲೆಟ್‌ಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಜನರ, ದನಕರುಗಳ ಹಾಗೂ ಇನ್ನಿತರ ಗೃಹೋಪಯೋಗಕ್ಕಾಗಿ 9 ಸೋಪಾನ ಕಟ್ಟೆಗಳು ಹಾಗೂ ಕ್ಯಾಟಲ್ ರ್‍ಯಾಂಪ್‌ಗಳನ್ನು ನಿರ್ಮಿಸಲು ಯೋಜಿಸಲಾಗಿದೆ. ಸದರಿ ಅಚ್ಚುಕಟ್ಟು ಪ್ರದೇಶದಲ್ಲಿನ 94 ಕೆರೆಗಳನ್ನು ಪುನರುಜ್ಜೀವನಗೊಳಿಸಲಾಗುವುದು. ವಿವರವಾದ ಯೋಜನಾ ವರದಿಯಂತೆ ಒಟ್ಟಾರೆಯಾಗಿ ಬಲದಂಡೆ ಕಾಲುವೆ, ಎಡದಂಡೆ ಕಾಲುವೆ ಹಾಗೂ 11 ಸಂಖ್ಯೆ ಉಪ ಕಾಲುವೆಗಳೂ ಸೇರಿದಂತೆ 63.823 ಕಿ.ಮೀ.ಗಳಷ್ಟು ಉದ್ದದ ಜಾಲವನ್ನು ಆಧುನೀಕರಣಗೊಳಿಸಲು ಯೋಜಿಸಲಾಗಿದೆ. ಸಿ.ಡಿ ಕಾಮಗಾರಿಗಳಿಗೆ ಇಡುಗಂಟು ಅವಕಾಶ ಕಲ್ಪಿಸಲಾಗಿದೆ. ಮುಖ್ಯ ಇಂಜಿನಿಯರ್‌ರವರು ರೂ. 38.00 ಕೋಟಿಗಳ ವಿವರವಾದ ಯೋಜನಾ ವರದಿಯನ್ನು ಸಲ್ಲಿಸಿ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಈ ಯೋಜನೆಗೆ KWDT ಸ್ಕೀಂ-ಎ ಅಡಿಯಲ್ಲಿ 2.20 ಟಿ.ಎಂ.ಸಿ ನೀರನ್ನು ಹಂಚಿಕೆ ಮಾಡಲಾಗಿದೆ. ಆದರೆ 2002ರ ಪರಿಷ್ಕೃತ ಮಾಸ್ಟರ್ ಪ್ಲಾನ್‌ನಲ್ಲಿ ನೀರಿನ ಹಂಚಿಕೆ 1.20 ಟಿ.ಎಂ.ಸಿ. ಆಗಿದ್ದು, ಈಗ 2.20 ಟಿ.ಎಂ.ಸಿ. ನೀರಿನ ಹಂಚಿಕೆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಸದರಿ ಯೋಜನೆಯ ಪ್ರಸ್ತಾವನೆಯನ್ನು 102ನೇ ತಾಂತ್ರಿಕ ಸಲಹಾ ಸಮಿತಿಯ ಸಭೆಯಲ್ಲಿ ಚರ್ಚಿಸಲಾಗಿ, ಸಮಿತಿಯು ಕೆಲವು ಆಕ್ಷೇಪಣೆಗಳನ್ನು ಎತ್ತಿರುತ್ತದೆ. ಮುಖ್ಯ ಇಂಜಿನಿಯರ್‌ರವರು ಸದರಿ ಆಕ್ಷೇಪಣೆಗಳಿಗೆ ಪಾಲನಾ ವರದಿಯನ್ನು ಸಲ್ಲಿಸಿದ್ದು, ಇದನ್ನು ತಾಂತ್ರಿಕ ಸಲಹಾ ಸಮಿತಿಗೆ ಕಳುಹಿಸಲಾಗಿರುತ್ತದೆ.

2012-13ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 4701-80-800 ಅಪೆಂಡಿಕ್ಸ್ ಇ ಅಡಿಯಲ್ಲಿ ಸದರಿ ಕಾಮಗಾರಿಗೆ ರೂ. 100.00 ಲಕ್ಷಗಳ ಅನುದಾನದ ಅವಕಾಶ ಕಲ್ಪಿಸಲಾಗಿದೆ.

ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಜಸಂಇ 59 ಎಂಎಂಬಿ 2012</u>**

**<u>ಬೆಂಗಳೂರು, ದಿನಾಂಕ : 04.02.2013</u>**

ಹಾವೇರಿ ಜಿಲ್ಲೆ, ಹಾನಗಲ್ ತಾಲ್ಲೂಕಿನ ಧರ್ಮಾ ಕಾಲುವೆ ಜಾಲದ ಆಧುನೀಕರಣ ಯೋಜನೆಯ ರೂ. 38.00 ಕೋಟಿಗಳ (ಮುವ್ವತ್ತೆಂಟು ಕೋಟಿ ರೂಪಾಯಿಗಳು ಮಾತ್ರ) ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಮುಂದುವರೆದಿದೆ... 3

ಈ ಯೋಜನೆಯನ್ನು ಕರ್ನಾಟಕ ನೀರಾವರಿ ನಿಗಮಕ್ಕೆ ವರ್ಗಾಯಿಸಿ ಅನುಷ್ಠಾನಗೊಳಸಲು ಹಾಗೂ ಯೋಜನೆಗೆ ಬೇಕಾಗುವ ಅನುದಾನವನ್ನು ನಿಗಮದ ಅನುದಾನದಲ್ಲಿ ಮರು ಹೊಂದಾಣಿಕೆ ಮೂಲಕ ಭರಿಸತಕ್ಕದ್ದು ಎಂದು ಸೂಚಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: PWD 05 FC-I / 2013 ದಿ. 19.01.2013 ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಿ. ಶ್ರೀನಿವಾಸಲು)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-1),
ಜಲ ಸಂಪನ್ಮೂಲ ಇಲಾಖೆ

**<u>ಇವರಿಗೆ</u> :-**

1. **ಪ್ರಧಾನ** ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು, (ಲೆಕ್ಕಪತ್ರ 1 ಮತ್ತು 2) ಹೊಸಕಟ್ಟಡ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗ.
5. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು (ಸಚಿವ ಸಂಪುಟ), ಪ್ರಕರಣ ಸಂ: ಸಿ: 91/2013, ದಿ: 19.01.2013 ರ ಅನ್ವಯ.
6. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಲೋ.ಇ, ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.